**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 743/2024**

**ಸಿ.ಡಬ್ಲ್ಯೂಃ 4, ಪಿ.ಡಬ್ಲ್ಯೂಃ 3**

| | | |
|---|---|---|
| ಸಾಕ್ಷಿದಾರರ ಹೆಸರು | : | ವಿಷ್ಣು |
| ತಂದೆಯ ಹೆಸರು | : | ನಾಗಪ್ಪ ನಾಯ್ಕ |
| ವಯಸ್ಸು | : | 51 ವರ್ಷ |
| ಉದ್ಯೋಗ | : | ಕೃಷಿ |
| ವಾಸ್ತವ್ಯ | : | ಬೈಲೂರು , ಮಡೀಕೆರಿ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 03/09/2024**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿ.27.12.2023 ರಂದು ನಮ್ಮ ಕೆಂಪು ಬಣ್ಣದ ಆಕಳು ತಿರ್ಕೊಂಡಿತ್ತು ಅದರ ಪಂಚನಾಮೆಗೆ ನನ್ನು ಕರೆದಿದ್ದರು. ಆಗ ಚಾಸಾ 5 ರವರು ಇದ್ದರು. ಬೈಲೂರು ಮಡೀಕೆರಿಯ ಗೋಪಾಲಕೃಷ್ಣ ಗೋ ಶಾಲೆಯ ಹತ್ತಿರ 11 - 12 ಗಂಟೆಯ ವರೆಗೆ ಪಂಚನಾಮೆ ಮಾಡಿರುತ್ತಾರೆ. ಸಾಕ್ಷಿಯು ಮೃತ ಪಟ್ಟ ಜಾನುವಾರ ಪಂಚನಾಮೆಯನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ನಿಪಿ.2 ಎಂದು, ಸಾಕ್ಷಿ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಫೋಟೋವನ್ನು ನೋಡಿ ಗುರುತಿಸಿದ್ದು , ಅದನ್ನು ನಿಪಿ.3 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎ.ಆರ್.ಎಸ್. ವಕೀಲರಿಂದ,**

2. ಗೋ ಶಾಲೆಯಲ್ಲಿ 60-70 ಜಾನುವಾರಗಳು ಇದ್ದವು. ಗೋ ಶಾಲೆಯಲ್ಲಿ ನಾನು ಕೆಲಸ ಮಾಡುತ್ತೇನೆ. ಆಕಳನ್ನು ಗುರುತು ಹಿಡಿಯಲು ಯಾವುದೇ ಟ್ಯಾಗ್ ಹಾಕಲಿಲ್ಲ. ಬೇರೆ ಬೇರೆ ಕಡೆಗಳಿಂದ ಬಂದ ಜಾನುವಾರಗಳನ್ನು ಗೋ ಶಾಲೆಯಲ್ಲಿ ಇಡಲಾಗುತ್ತದೆ. ಪಶು ವೈದ್ಯಾಧಿಕಾರಿಗಳು ಮತ್ತು ಪೊಲೀಸರು ಗೋ ಶಾಲೆಗೆ 10.30-11 ಗಂಟೆಯ ಒಳಗೆ ಬಂದಿದ್ದರು. ಪಂಚನಾಮೆಯಲ್ಲಿ ಜಾನುವಾರದ ಗುರುತು ಕೆಂಪು ಬಣ್ಣದಾಗಿದೆ ಎಂದು ನುಡಿಯುತ್ತಾರೆ. ಪಂಚನಾಮೆಯನ್ನು ಓದಿ ನಾನು ಸಹಿ ಮಾಡಿದ್ದೇನೆ. ಆಕಳಿನ postmortem ನನ್ನ ಸಮಕ್ಷಮದಲ್ಲಿ ಮಾಡಿದಾದರೆ. ಆಕಳು ಕಾಯಿಲೆ ಇದ್ದ ಕಾರಣ ಮೃತಪಟ್ಟಿದೆ. ಗೋ ಶಾಲೆಯಲ್ಲಿ ಸದರಿ ಆಕಳನ್ನು ಹೊರತು ಪಡಿಸಿ ಬೇರೆ ಯಾವುದೇ ಜಾನುವಾರಗಳು ಮೃತ ಪಟ್ಟಿಲ್ಲ. ಗೋ ಶಾಲೆಗೆ ವೈದ್ಯರು ಬರುತ್ತಾರೆ. ಗೋ ಶಾಲೆಯಲ್ಲಿ

ಖಾಯಂ ಆದ ಯಾವುದೇ ವೈದ್ಯ ರು ಇಲ್ಲ. ಸದರಿ ಜಾನುವಾರ 4–5 ದಿನಗಳಿಂದ ಹುಷಾರ್ ಇರಲಿಲ್ಲ. ಸದರಿ ಜಾನುವಾರಿಗೆ ವೈದ್ಯರು ಬಂದು ಚಿಕಿತ್ಸೆ ನೀಡಿದ್ದರು. ತಾಲೂಕಾ ವೈದ್ಯಾಧಿಕಾರಿಗಳು ಸದರಿ ಜಾನುವಾರದ post ಮಾಡಿದ್ದರು. ಪಂಚನಾಮೆಯಲ್ಲಿ ಖಾಯಿಲೆಯಿಂದ ಜಾನುವಾರ ಮೃತ ಪಟ್ಟಿದೆ ಎಂದು ನಮೂದು ಮಾಡಿಲ್ಲ. ಜಾನುವಾರಿಗೆ ಯಾವುದೇ ಪೆಟ್ಟಾಗಿ ಬಳಲುತ್ತಿರಲ್ಲ. ಜಾನುವಾರಿಗೆ ಯಾವ ಖಾಯಿಲೆ ಬಂದಿತ್ತು ಎಂದು ನಮಗೆ ಗೊತಿಲ್ಲ. ಸದರಿ ಜಾನುವಾರವು ಸುಮಾರು 4–5 ವರ್ಷದ ಜಾನುವಾರ ಆಗಿತ್ತು. ನ್ಯಾಯಾಲಯದಲ್ಲಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗೋ ಶಾಲೆಯವರ ನಿಶ್ಕಾಳಜಿಯಿಂದ ಜಾನುವಾರ ಮೃತ ಪಟ್ಟಿದೆ ಎಂದರೆ ಸರಿಯಲ್ಲ. ಗೋ ಶಾಲೆಯಲ್ಲಿ ಹಲವಾರು ಜಾನುವಾರಗಳು ಮೃತ ಪಟ್ಟಿದ್ದರು ಸಹ ಮೃತ ಪಟ್ಟಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ಸುಳ್ಳು ಪಂಚನಾಮೆಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣಕ್ಕೂ ಮತ್ತು ಸದರ ಜಾನುವಾರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಯಾವ ಸಮಯಕ್ಕೆ ಜಾನುವಾರವು ಮೃತ ಪಟ್ಟಿದೆ ಎಂದು ಎಲ್ಲಿಯೂ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**